ಹಾಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಮ್ಮ ಇಲಾಖೆ ನಿಧಾನ ಮಾಡುತ್ತಿದೆ. ಸಂಬಳ ಕೊಡದೇ ಇದ್ದರೆ ಶಿಕ್ಷಕರ ಗತಿ ಏನು? ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದಂಥ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.— ಆಡಳಿತ ಮಂಡಲಿಯವರ ಮತ್ತು ಶಿಕ್ಷಕರ ಮಧ್ಯೆ ಜಗಳ ಉಂಟಾಗಿದ್ದ ಆಡಳಿತ ಮಂಡಲಿಯವರು ಒಬ್ಬರನ್ನು ಆರಿಸಿ ಇವರು ಮುಖ್ಯೋಪಾಧ್ಯಾಯರು ಎಂದು ಹೇಳಿದಾಗ ಅವರನ್ನು ಬೇರೆ ಶಿಕ್ಷಕರು ಒಪ್ಪಿಕೊಳ್ಳದೆ. ಶಿಕ್ಷಕರು ಮತ್ತು ಪೋಷಕರು ಸೇರಿ ಕೊಂಡು ಬೇರೆ ಒಬ್ಬರ ಹೆಸರನ್ನು ಸೂಚಿಸಿ ಅವರು ಮುಖ್ಯೋಪಾಧ್ಯಾಯರಾಗಬೇಕು ಎಂದು ಹೇಳಿದರು. ಈ ರೀತಿಯ ಒಳ ಜಗಳದಿಂದಾಗಿ ಇದು ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ಅದೂ ಅಲ್ಲದೆ. ೧೯೮೫-೮೬ರಿಂದ ಆ ಶಾಲೆಯ ಮಾನ್ಯತೆಯನ್ನು ನವೀಕೃತ ಮಾಡಿಕೊಂಡಿರುವುದಿಲ್ಲ ಮತ್ತು ಸ್ಥಿರ ಆಸ್ತಿಯ ಬಗ್ಗೆ ಬಾಕಿಯೊತ್ತ ೨ ಸಾವಿರ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ. ಅನುದಾನದ ಪ್ರಸ್ತಾವನೆಯನ್ನು ಈವರೆಗೂ ಸಲ್ಲಿಸಿಲ್ಲ. ಮತ್ತು ಶಾಲೆಯನ್ನು ಅನುದಾನಕ್ಕೆ ಒಳಪಡಿಸುವ ಸಮಯದಲ್ಲಿ ತೋರಿಸಲಾದ ಪೀಠೋಪಕರಣಗಳು ಮತ್ತು ಪಾಠೋಪಕರಣಗಳು ಈಗ ಶಾಲೆಯಲ್ಲಿ ಇರುವುದಿಲ್ಲ. ಇದು ತನಿಖೆಯಿಂದ ವ್ಯಕ್ತವಾಗಿದೆ. ಈಗ ಪೋಷಕರು. ಶಿಕ್ಷಕರು ಮತ್ತು ಆಡಳಿತ ಮಂಡಲಿಯವರೂ ಬೇರೆ ಬೇರೆ ಗುಂಪುಗಳಾಗಿರುವುದರಿಂದ ಅದರ ಬಗ್ಗೆ ಇತ್ಯರ್ಥ ಮಾಡಿ ಅನಂತರ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ — ಮ್ಯಾನೇಜ್‌ಮೆಂಟ್‌ನವರು ನನ್ನ ಕ್ಷೇತ್ರವಾದ ಶಿರಾಳ ಕೊಪ್ಪದಲ್ಲಿ ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಈಗ ತಾವು ಬಿಲ್ ಕಳುಹಿಸಿಲ್ಲ, ಅಲ್ಲಿ ಸಾಕಷ್ಟು ಗೊಂದಲ ಇದೆ ಎಂದು ತಾವು ಏನು ಹೇಳುತ್ತಿದ್ದೀರಿ ಅದು ಸತ್ಯ ಇದೆ. ಈಗ ಅವರು ಬಹಳ ಕಿರುಕುಳ ಅನುಭವಿಸುತ್ತಿರುವುದರಿಂದ ಕಾನೂನು ಪ್ರಕಾರ ತಕ್ಷಣ ಕ್ರಮ ತೆಗೆದುಕೊಂಡು ಶಿಕ್ಷಕರಿಗೆ ಸಂಬಳ ಕೊಡ ತಕ್ಕ ವ್ಯವಸ್ಥೆ ಮಾಡಬೇಕು. ಮಕ್ಕಳ ಪೋಷಕರೂ ಮತ್ತು ಟೀಚರ್ಸ್ ಕಾನೂನು ಬದ್ಧವಾಗಿ ಕೇಳುತ್ತಿದ್ದಾರೆ. ಮೊದಲು ಶಿಕ್ಷಕರಿಗೆ ಸಂಬಳ ಸಿಕ್ಕತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಎಂ. ಚಂದ್ರಶೇಖರ್.— ಆಯುಕ್ತರು ತೀರ್ಮಾನ ತೆಗೆದುಕೊಳ್ಳಬೇಕಾದರೆ ಆಡಳಿತ ಮಂಡಲಿ ಮತ್ತು ಇವರನ್ನು ಕರೆಸಿ ತೀರ್ಮಾನ ಕೊಡಬೇಕಾಗುತ್ತದೆ. ಅವರೇ ಒಂದು ಸಮಿತಿ ಮಾಡಿ ಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವರು ಮಾಡಿ ಕಳುಹಿಸಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.— ಆಡಳಿತ ಮಂಡಲಿಯವರಿಗೆ ನಾವು ಕೇಳಬೇಕಾಗುತ್ತದೆ. ಇದರ ಬಗ್ಗೆ ನಾನು ಆಯುಕ್ತರಿಗೆ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪ್ರಭಾರ ಮುಖ್ಯ ಶಿಕ್ಷಕರು ಯಾರು ಆಗಬೇಕೆಂಬುದರ ಬಗ್ಗೆ ಸಮಯ ತೆಗೆದುಕೊಳ್ಳಿ. ಸುಮಾರು ೮-೯ ತಿಂಗಳಿಂದ ಶಿಕ್ಷಕರುಗಳಿಗೆ ಸಂಬಳ ಇಲ್ಲದೆ ತೊಂದರೆಯಾಗಿದೆ. ಆದ್ದರಿಂದ. ಇವರುಗಳಿಗೆ ಸಂಬಳ ಕೊಡಿಸತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.— ಈಗ ಕೆಲವು ಆಡಳಿತ ಮಂಡಲಿ ವಶದಲ್ಲಿರುವುದರಿಂದ ಕೆಲವು ನಿಯಮಗಳು ಪಾಲನೆ ಆಗಲಿಲ್ಲ. ಆದ್ದರಿಂದ, ವೇತನ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಇತ್ಯರ್ಥ ಮಾಡಿ ಕ್ರಮ ತೆಗೆದುಕೊಳ್ಳಲಿಕ್ಕೆ ಆಯುಕ್ತರಿಗೆ ತಿಳಿಸುತ್ತೇನೆ.

ಉಡುಪಿ ತಾಲ್ಲೂಕಿನ ಪೊಲಿಪುನಲ್ಲಿರುವ ಸರಕಾರಿ ಜ್ಯೂನಿಯರ್ ಕಾಲೇಜು

ಶ್ರೀ. ಶ್ರೀ ವಸಂತ ವಿ. ಸಾಲಿಯಾನ್ (ಕಾಪು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೯-೯೦ರಲ್ಲಿ ಕಾಪು ಕ್ಷೇತ್ರದ ಪೊಲಿಪು ಸರ್ಕಾರಿ ಜ್ಯೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಮಾಡುವ ಯೋಜನೆ ಏನಾದರೂ ಇದೆಯೆ?

ಆ) ಹಾಗಿದ್ದಲ್ಲಿ. ಈ ಯೋಜನೆ ಯಾವ ಹಂತದಲ್ಲಿದೆ ಹಾಗೂ ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಎಂ. ಚಂನ್ರಶೇಖರ್ (ಶಿಕ್ಷಣ ಮಂತ್ರಿಗಳು).

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ವಸಂತ ವಿ. ಸಾಲಿಯಾನ. — ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ. ನಾನು ಕೇಳಿತಕ್ಕಂಥಾದ್ದು ಇಷ್ಟೆ, ಕಾಪು ಕ್ಷೇತ್ರದ ಪೊಲಿಪು ಸರ್ಕಾರಿ ಜೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣ ಕಾಲೇಜು ಮಾಡಲಿಕ್ಕೆ ಸಾರ್ವಜನಿಕರಿಂದ ಮನವಿ ಬಂದಿದೆಯೇ? ಇನ್ನು ಎರಡನೆಯದಾಗಿ ಕೇಳಬೇಕೆಂದರೆ ಈ ವಿಚಾರದಲ್ಲಿ ಅಧಿಕಾರಿಗಳು ಯಾವ ಮಟ್ಟದವರೆಗೆ ಪರಿಶೀಲನೆ ನಡೆಸಿದ್ದಾರೆಂದು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.— ಅಧ್ಯಕ್ಷರೆ: ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ ಕಿರಿಯ ಕಾಲೇಜು ಏನಿದೆ ಅದನ್ನು ಪ್ರಥಮ ದರ್ಜೆ ಕಾಲೇಜು ಮಾಡಬೇಕೆಂದು ಹೇಳುತ್ತಿದ್ದಾರೆ. ಇವೊತ್ತು ಸರ್ಕಾರದ ನೀತಿ ಏನೆಂದರೆ. ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಈಗ ಇರುವ ಸಂಖ್ಯೆಗಿಂತಲೂ ಹೆಚ್ಚು ಮಾಡುವ ಅಗತ್ಯ ಇದೆಯೇ ಎನ್ನುವುದು ಮೊದಲನೆಯದು. ಈಗ ಸರ್ಕಾರ ಕಾಲೇಜಿಗೆ ಮಂಜೂರಾತಿ ಮಾಡಬೇಕಾದರೆ ಹಣದ ವ್ಯವಸ್ಥೆ ನೋಡಿಕೊಂಡು ಮಾಡಬೇಕಾಗುತ್ತದೆ. ಆ ಭಾಗದ ಸುತ್ತಮುತ್ತ ಯಾವುದೂ ಕಾಲೇಜುಗಳು ಇಲ್ಲವೇ ಹೇಗೆ ಎನ್ನುವುದನ್ನು ತನಿಖೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಮುಂದಿನ ವರ್ಷ ನೋಡಬಹುದು.

ಶ್ರೀ ವಸಂತ ವಿ. ಸಾಲಿಯಾನ.— ಈ ವಿಚಾರದಲ್ಲಿ ೧೯೮೫ರಿಂದಲೂ ಸಾರ್ವಜನಿಕರಿಂದ ಬೇಡಿಕೆ ಬಂದಿದೆ. ೧೯೮೫ರಲ್ಲಿ ಮಂಗಳೂರು ಉಪ ನಿರ್ದೇಶಕರು ಬಂದು ಪರಿಶೀಲನೆ ನಡೆಸಿ ವರದಿಯನ್ನು ಸರ್ಕಾರದ ಮುಂದೆ ಇಟ್ಟಿದ್ದರು. ೧೯೮೬ರಲ್ಲಿ ಪುನಃ ಅಧಿಕಾರಿಗಳು ಬಂದು ಸಾರ್ವಜನಿಕರು ಮತ್ತು ಪೆಟರ್‌ಮೆಂಟ್ ಕಮಿಟಿ ಮಿಟಿಂಗ್ ಕರೆದು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಮಂತ್ರಿಗಳು ಸರ್ಕಾರದ ಗಮನಕ್ಕೆ ಬರಲಿಲ್ಲ ಎಂದು ಹೇಳುತ್ತಾರೆ. ಈ ಸದನದಲ್ಲಿ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಇದರ ಬಗ್ಗೆ ೧೯೮೫ರಿಂದ ೧೯೮೮ರವರೆಗೆ ಪರಿಶೀಲನೆ ನಡೆದಿದೆ. ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದೇ ಇದ್ದರೆ ಸರ್ಕಾರದ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಿಳಿದುಕೊಳ್ಳಬಹುದು. ಕರಾವಳಿ ಪ್ರದೇಶಕ್ಕೆ ಕಾಲೇಜು ಕೊಡಬೇಕೆಂದು ಬಹಳ ಸಾರಿ ಹೇಳಿದ್ದು, ಹಲವಾರು ಬಾರಿ ಮನವಿಗಳನ್ನು ಕೊಡಲಾಗಿದೆ. ಆ ಪ್ರದೇಶದ ವಿದ್ಯಾರ್ಥಿಗಳು ಬಹಳ ದೂರ ಹೋಗಬೇಕಾಗಿರುವುದರಿಂದ ಕಾಲೇಜಿನ ಅವಶ್ಯಕತೆ ಬಹಳ ಇದೆ. ಆದ್ದರಿಂದ, ಕರಾವಳಿ ಪ್ರದೇಶಕ್ಕೆ ಒಂದು ಕಾಲೇಜು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೆ. ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆಗೂ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೂ ಹೋಲಿಕೆಯನ್ನು ಮಾಡಿದರೆ ಬೇರೆ ಯಾವ ರಾಜ್ಯದಲ್ಲೂ ಇಲ್ಲದೇ ಇರುವಷ್ಟು ಸಂಖ್ಯೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳಲ್ಲಿವೆ. ಇನ್ನೂ ಹೆಚ್ಚಿನ ಕಾಲೇಜುಗಳ ಅವಶ್ಯಕತೆ ನಮ್ಮ ರಾಜ್ಯದಲ್ಲಿದೆಯೇ ಅಥವಾ ಇಲ್ಲವೆ ಎಂಬುದನ್ನು ನಾವು ಪರಿಶೀಲಿಸಬೇಕಾಗುತ್ತದೆ. ಅವಶ್ಯಕತೆ ಇದೆಯೆಂದು ಕಂಡುಬಂದರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಈ ವಿಷಯವನ್ನು ಪರಿಶೀಲಿಸುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಗೋಕಾಕ್ ಸಮಿತಿ ವರದಿಯನ್ನು ಜಾರಿಗೊಳಿಸುವುದು

೩೬೮. ಶ್ರೀ ಮಹಮ್ಮದ್ ಲೈಕುದ್ದಿನ್ (ಬೀದರ್).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ಸಮಿತಿಯ ವರದಿಯ ಆಧಾರದ ಮೇಲೆ ಕನ್ನಡವನ್ನು ಏಕೈಕ ಭಾಷೆ ಎಂದು ಸರ್ಕಾರವು ೧೯೮೬ನೇ ಸಾಲಿನಲ್ಲಿ ಹೊರಡಿಸಿರುವ ಆದೇಶ ಹಾಗೂ ತದ ನಂತರದ ಆದೇಶಗಳನ್ನು ರಾಜ್ಯದ ಉಚ್ಚ ನ್ಯಾಯಾಲಯವು ತಡೆ ಹಿಡಿದು ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ದಿನಾಂಕ ೨೫-೨-೮೮ರಂದು ರಾಜ್ಯದ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಆಧಾರದ ಮೇಲೆ ಸರ್ಕಾರವು ಹೊಸ ಆದೇಶಗಳನ್ನೇನಾದರೂ ಹೊರಡಿಸಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರ ಯಾವಾಗಿನಿಂದ ಈ ಸಂಬಂಧವಾಗಿ ಆದೇಶಗಳನ್ನು ಹೊರಡಿಸುತ್ತದೆ.